ಕರ್ನಾಟಕ ಸರ್ಕಾರ

# ಹಾಸನ ವೈದ್ಯಕೀಯ ಮತ್ತು ವಿಜ್ಞಾನಗಳ ಸಂಸ್ಥೆ, ಹಾಸನ.

# HASSAN INSTITUTE OF MEDICAL SCIENCES, HASSAN

(An Autonomous Institute under the Dept of Medical Education, Government of Karnataka)

SRI CHAMARAJENDRA HOSPITAL CAMPUS, HASSAN

Website: www.hims-hassan.org Phone/Fax No.08172-231699, 231599, Email:directorhims@yahoo.com

# 22ನೇ ಆರ್ಥಿಕ ಸಮಿತಿ ಸಭೆಯ ನಡವಳಿಗಳು

## ದಿನಾಂಕ: 22-11-2019ರಂದು ಶುಕ್ರವಾರ

## ಮಧ್ಯಾಹ್ನ: 2.30 ಗಂಟೆಗೆ

: ಸ್ಥಳ :

ಕೊಠಡಿ ಸಂಖ್ಯೆ: 601, 6ನೇ ಮಹಡಿ, 4ನೇ ಹಂತ,

ಬಹುಮಹಡಿ ಕಟ್ಟಡ, ಅಂಬೇಡ್ಕರ್ ವಿಧಿ, ಬೆಂಗಳೂರು

ಕರ್ನಾಟಕ ಸರ್ಕಾರ
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ
HASSAN INSTITUTE OF MEDICAL SCIENCES, HASSAN
(An Autonomous Institute under the Dept of Medical Education, Government of Karnataka)
SRI CHAMARAJENDRA HOSPITAL CAMPUS, HASSAN-573201
Website: www.hims-hassan.org Phone/Fax No.08172-231699 Email:directorhims@yahoo.com

# 22ನೇ ಆರ್ಥಿಕ ಸಮಿತಿ ಸಭೆಯಲ್ಲಿ ಚರ್ಚಿಸುವ ವಿಷಯಗಳು

ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 22ನೇ ಆರ್ಥಿಕ ಸಮಿತಿ ಸಭೆಯು ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ, ಕರ್ನಾಟಕ ಸರ್ಕಾರ, ಬೆಂಗಳೂರು ಹಾಗೂ ಅಧ್ಯಕ್ಷರು, ಆರ್ಥಿಕ ಸಮಿತಿ ಸಭೆ, ಹಿಮ್ಸ್ ಹಾಸನ ಇವರ ಅಧ್ಯಕ್ಷತೆಯಲ್ಲಿ ದಿನಾಂಕ:22-11-2019 ರಂದು ಶುಕ್ರವಾರ ಮಧ್ಯಾಹ್ನ:2.30ಗಂಟೆಗೆ ಕೊಠಡಿ ಸಂಖ್ಯೆ:601, 6ನೇ ಮಹಡಿ, 4ನೇ ಹಂತ, ಬಹುಮಹಡಿ ಕಟ್ಟಡ, ಅಂಬೇಡ್ಕರ್ ವಿಧಿ, ಬೆಂಗಳೂರು ಇಲ್ಲಿ ಸಭೆ ಸೇರಿ ನಡೆಸಿದ ಸಭಾ ನಡವಳಿಗಳು.

**ಒಟ್ಟು ಸದಸ್ಯರ ಸಂಖ್ಯೆ:10** **ಹಾಜರಿದ್ದ ಸದಸ್ಯರ ಸಂಖ್ಯೆ: 09**

| | | | |
|---|---|---|---|
| 1 | ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, 6ನೇ ಮಹಡಿ, 4ನೇ ಹಂತ, ಬೆಂಗಳೂರು. | ಅಧ್ಯಕ್ಷರು | ಹಾಜರಿರುತ್ತಾರೆ |
| 2 | ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು. | ಸದಸ್ಯರು | ಹಾಜರಿರುತ್ತಾರೆ |
| 3 | ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಯೋಜನಾ ಇಲಾಖೆ, ವಿಧಾನ ಸೌಧ, ಬೆಂಗಳೂರು. | ಸದಸ್ಯರು | ಹಾಜರಿರುತ್ತಾರೆ |
| 4 | ಮಾನ್ಯ ಸರ್ಕಾರದ ಉಪಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, 6ನೇ ಮಹಡಿ, 4ನೇ ಹಂತ, ಬೆಂಗಳೂರು | ಸದಸ್ಯರು | ಹಾಜರಿರುತ್ತಾರೆ |
| 5 | ಮಾನ್ಯ ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಆನಂದರಾವ್ ವೃತ್ತ, ಬೆಂಗಳೂರು | ಸದಸ್ಯರು | ಹಾಜರಿರುತ್ತಾರೆ |
| 6 | ನಿರ್ದೇಶಕರು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯರು | ಹಾಜರಿರುತ್ತಾರೆ |
| 7 | ಮುಖ್ಯ ಆಡಳಿತಾಧಿಕಾರಿಗಳು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯರು | -- |
| 8 | ಪ್ರಾಂಶುಪಾಲರು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯರು | ಹಾಜರಿರುತ್ತಾರೆ |
| 9 | ವೈದ್ಯಕೀಯ ಅಧೀಕ್ಷಕರು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯರು | ಹಾಜರಿರುತ್ತಾರೆ |
| 10 | ಆರ್ಥಿಕ ಸಲಹೆಗಾರರು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯ ಕಾರ್ಯದರ್ಶಿ | ಹಾಜರಿರುತ್ತಾರೆ |



ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| 1 | ದಿನಾಂಕ:10–7–2019ರಂದು ನಡೆದ 21ನೇ ಆರ್ಥಿಕ ಸಮಿತಿ ಸಭೆಯ ಅನುಪಾಲನಾ ವರದಿಯನ್ನು ಓದಿ ಅಂಗೀಕರಿಸುವುದರ ಬಗ್ಗೆ. | ದಿನಾಂಕ:10–07–2019ರಂದು ನಡೆದ 21ನೇ ಆರ್ಥಿಕ ಸಮಿತಿ ಸಭೆಯಲ್ಲಿ 24 ವಿಷಯಗಳ ಬಗ್ಗೆ ಚರ್ಚಿಸಿ ತೆಗೆದುಕೊಂಡಿದ್ದ ತೀರ್ಮಾನಗಳನ್ವಯ ಸಂಸ್ಥೆಯಿಂದ ತೆಗೆದುಕೊಂಡಿರುವ ಕ್ರಮಗಳ ಅನುಪಾಲನಾ ವರದಿಯನ್ನು ಸಂಸ್ಥೆಯ ಆರ್ಥಿಕ ಸಲಹೆಗಾರರು ಸಭೆಯ ಮುಂದೆ ಮಂಡಿಸಿದರು. ಸದರಿ ಸಭೆಯ ಅನುಪಾಲನಾ ವರದಿಯನ್ನು ಪರಿಶೀಲಿಸಿ ಈ ಪೈಕಿ<br>**ಅಜೆಂಡಾ ಕ್ರಮ ಸಂಖ್ಯೆ:** 20ರ ಬಗ್ಗೆ ಮರು ಪರಿಶೀಲಿಸಲಾಯಿತು. ಬಯೋಮೆಡಿಕಲ್ ಇಂಜಿನಿಯರ್ ಹಾಗೂ ದೈಹಿಕ ಶಿಕ್ಷಕರಿಗೆ 21ನೇ ಆರ್ಥಿಕ ಸಮಿತಿ ಸಭೆಯಲ್ಲಿ ನಿಗದಿಪಡಿಸಿದ್ದ ವೇತನವು ಹೆಚ್ಚಾಗಿರುವುದರಿಂದ ಕನಿಷ್ಠ ಕಾರ್ಮಿಕರ ವೇತನ ಪಾವತಿಸಬಹುದೇ ಎಂಬುದರ ಬಗ್ಗೆ ಪರಾಮರ್ಶಿಸಲಾಯಿತು. ಆದರೆ ಕನಿಷ್ಠ ಕಾರ್ಮಿಕರ ವೇತನವು ಕಡಿಮೆ ಇರುವುದರಿಂದ ಸಂಬಂಧಿತ ನೌಕರರುಗಳು ಕರ್ತವ್ಯವನ್ನು ಬಿಟ್ಟು ಹೋಗುವುದರಿಂದ ಸದರಿ ಹುದ್ದೆಗಳು ಎಮ್.ಸಿ.ಐ. ನಿಯಮಾನುಸಾರ ಅತಿ ಅವಶ್ಯಕ ಹುದ್ದೆಗಳಾಗಿರುವುದರಿಂದ ಸರ್ಕಾರದಿಂದ ಹುದ್ದೆಗಳು ಮಂಜೂರಾಗಿ ಖಾಯಂ ನೇಮಕಾತಿ ಆಗುವವರೆಗೆ 21ನೇ ಆರ್ಥಿಕ ಸಮಿತಿ ಸಭೆಯಲ್ಲಿ ನಿಗದಿಪಡಿಸಿರುವ ವೇತನವನ್ನೇ ಪಾವತಿಸುವುದೆಂದು ತೀರ್ಮಾನಿಸಲಾಯಿತು.<br>**ಅಜೆಂಡಾ ಕ್ರಮ ಸಂಖ್ಯೆ:** 21ರ ಬಗ್ಗೆ ಮರುಪರಿಶೀಲಿಸಲಾಯಿತು. ರೇಡಿಯಾಲಜಿ ವಿಭಾಗದಲ್ಲಿ ಎಮ್.ಆರ್.ಐ. ತಂತ್ರಜ್ಞರುಗಳಿಗೆ 21ನೇ ಆರ್ಥಿಕ ಸಮಿತಿ ಸಭೆಯಲ್ಲಿ ನಿಗದಿಪಡಿಸಿದ್ದ ವೇತನವು ಹೆಚ್ಚಾಗಿರುವುದರಿಂದ ಕನಿಷ್ಠ ಕಾರ್ಮಿಕರ ವೇತನ ಪಾವತಿಸಬಹುದೇ ಎಂಬುದರ ಬಗ್ಗೆ ಪರಾಮರ್ಶಿಸಲಾಯಿತು. ಆದರೆ ಕನಿಷ್ಠ ಕಾರ್ಮಿಕರ ವೇತನವು ಕಡಿಮೆ ಇರುವುದರಿಂದ ಸಂಬಂಧಿತ ನೌಕರರುಗಳು ಕರ್ತವ್ಯವನ್ನು ಬಿಟ್ಟು ಹೋಗುವುದರಿಂದ ಎಮ್.ಆರ್.ಐ. ವಿಭಾಗವು ಸ್ಥಗಿತಗೊಂಡು ರೋಗಿಗಳಿಗೆ ತೊಂದರೆಯಾಗುವುದರಿಂದ ಹಾಗೂ ಸದರಿ ಹುದ್ದೆಗಳು ಎಮ್.ಸಿ.ಐ. ನಿಯಮಾನುಸಾರ ಅತಿ ಅವಶ್ಯಕ ಹುದ್ದೆಗಳಾಗಿರುವುದರಿಂದ ಸರ್ಕಾರದಿಂದ ಹುದ್ದೆಗಳು ಮಂಜೂರಾಗಿ ಖಾಯಂ ನೇಮಕಾತಿ ಆಗುವವರೆಗೆ 21ನೇ ಆರ್ಥಿಕ ಸಮಿತಿ ಸಭೆಯಲ್ಲಿ ನಿಗದಿಪಡಿಸಿರುವ ವೇತನವನ್ನೇ ಪಾವತಿಸುವುದೆಂದು ತೀರ್ಮಾನಿಸಲಾಯಿತು.<br>**ಅಜೆಂಡಾ ಕ್ರಮ ಸಂಖ್ಯೆ:** 22ರ ಬಗ್ಗೆ ಮರುಪರಿಶೀಲಿಸಲಾಯಿತು. ಸಂಸ್ಥೆಯ ಲೆಕ್ಕ ಪತ್ರಗಳ ಪರಿಶೋಧನೆಗೆ ಟೆಂಡರ್ ಕರೆಯುವುದರಿಂದ ಟೆಂಡರ್‌ನಲ್ಲಿ ಭಾಗವಹಿಸದೇ ಇರುವ ಸಂಭವವೇ ಹೆಚ್ಚಾಗಿರುವುದರಿಂದ ದರಪಟ್ಟಿ ಕರೆದು 2019–20ನೇ ಸಾಲಿನಿಂದ 2021–22ನೇ ಸಾಲಿಗೆ 3 ವರ್ಷದ ಅವಧಿಗೆ ಲೆಕ್ಕ –ಪರಿಶೋಧಕರ ಸೇವೆಯನ್ನು ಪಡೆದುಕೊಳ್ಳುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. |
| 2 | 2019–20ನೇ ಸಾಲಿನಲ್ಲಿ ಹಿಮ್ಸ್ ಸಂಸ್ಥೆಗೆ ಸರ್ಕಾರದಿಂದ | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಸರ್ಕಾರದಿಂದ 2019–20ನೇ ಸಾಲಿಗೆ ಕೋರಲಾಗಿದ್ದ ಅನುದಾನ ಸರ್ಕಾರದಿಂದ ವಿವಿಧ ಲೆಕ್ಕ–ಶೀರ್ಷಿಕೆಯಡಿ ನಿಗದಿಯಾಗಿರುವ ಅನುದಾನ, ಸದರಿ ಅನುದಾನದಲ್ಲಿ ವೆಚ್ಚ ಮಾಡಲಾಗಿರುವ ವಿವರ ಮತ್ತು |



ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ - 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| | ಬಿಡುಗಡೆಯಾಗಿರುವ ಅನುದಾನ ಮತ್ತು ವೆಚ್ಚಗಳ ಆರ್ಥಿಕ ಸ್ಥಿತಿಗತಿಗಳ ಬಗ್ಗೆ ವಿಮರ್ಶೆ. | ಬ್ಯಾಂಕ್ ಖಾತೆಗಳಲ್ಲಿ ಲಭ್ಯವಿರುವ ಅನುದಾನದ ಆರ್ಥಿಕ ಸ್ಥಿತಿಗತಿಗಳ ಬಗ್ಗೆ ವಿವರಿಸುತ್ತಾ 2018-19ನೇ ಸಾಲಿಗೆ ಮತ್ತು 2019-20ನೇ ಸಾಲಿನಲ್ಲಿ ಹೊರಗುತ್ತಿಗೆ ನೌಕರರ ವೇತನಕ್ಕೆ ಮತ್ತು ರೋಗಿಗಳ ಔಷಧಿಗೆ ಕೊರತೆ ಇದ್ದ ಅನುದಾನದ ಬಗ್ಗೆ ದಿನಾಂಕ : 21-5-2018ರಂದು ನಡೆದ 19ನೇ ಆರ್ಥಿಕ ಸಮಿತಿ ಸಭೆಯಲ್ಲಿ ಚರ್ಚಿಸಿದ್ದು ಕೊರತೆಯಾಗಿರುವ ಅನುದಾನಕ್ಕೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ. ಸರ್ಕಾರದಿಂದ ಕೊರತೆಯಾಗಿರುವ ಅನುದಾನವು ಬಿಡುಗಡೆಯಾಗದ ಕಾರಣ ಬೋಧಕ ಆಸ್ಪತ್ರೆಯ ಯೂಸರ್ಸ್ ನಿಧಿಯಿಂದ ಬಿಲ್‌ಗಳನ್ನು ಪಾವತಿಸಲು ಕ್ರಮವಹಿಸಲಾಗಿದೆ. ಎಂಬ ಮಾಹಿತಿಯನ್ನು ಆರ್ಥಿಕ ಸಲಹೆಗಾರರು ಸಭೆಯ ಮುಂದೆ ಮಂಡಿಸಿದರು.<br>ಸದರಿ ವಿಷಯದ ಬಗ್ಗೆ ಚರ್ಚಿಸಲಾಯಿತು. ಸರ್ಕಾರದಿಂದ ಕೊರತೆ ಇರುವ ಅನುದಾನವು ಬಿಡುಗಡೆಯಾಗುವ ವರೆಗೂ ಅತಿ ಅವಶ್ಯಕವಿರುವ ಬಿಲ್‌ಗಳನ್ನು ಯೂಸರ್ಸ್ ನಿಧಿಯಿಂದ ಭರಿಸಿ ಸರ್ಕಾರದಿಂದ ಅನುದಾನ ಬಿಡುಗಡೆಯಾದ ನಂತರ ಮರುಹೊಂದಾಣಿಕೆ ಮಾಡಿಕೊಳ್ಳಲಾಗುವುದೆಂದು ತೀರ್ಮಾನಿಸಲಾಯಿತು. |
| 3 | ಸಂಸ್ಥೆಯ ಕಾಲೇಜು, ಬೋಧಕ ಆಸ್ಪತ್ರೆ ಹಾಗೂ ಆವರಣದ ಸುತ್ತ ಮುತ್ತಲಿನ ಉದ್ಯಾನವನಗಳನ್ನು ನಿರ್ವಹಣೆಗೆ 2020-21ನೇ ಸಾಲಿಗೆ ಇ-ಟೆಂಡರ್ ಕರೆಯುವ ಬಗ್ಗೆ. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಕಾಲೇಜು ಹಾಗೂ ಬೋಧಕ ಆಸ್ಪತ್ರೆಯ ಮುಂಭಾಗದಲ್ಲಿರುವ ಉದ್ಯಾನವನಗಳು ಮತ್ತು ಆವರಣಗಳ ಸುತ್ತಲು ಇರುವ ಉದ್ಯಾನವನಗಳನ್ನು ನಿರ್ವಹಣೆ ಮಾಡಲು ವಾರ್ಷಿಕ ಅಂದಾಜು ರೂ.4.00 ಲಕ್ಷಗಳಾಗುವುದರಿಂದ ಕೆ.ಟಿ.ಪಿ.ಪಿ ನಿಯಮಾನುಸಾರ ಇ-ಟೆಂಡರ್ ಕರೆಯಲು ಅನುಮೋದನೆ ನೀಡುವಂತೆ ಸಂಸ್ಥೆಯ ಆರ್ಥಿಕ ಸಲಹೆಗಾರರು ಸಭೆಯ ಮುಂದೆ ವಿಷಯವನ್ನು ಮಂಡಿಸಿದರು.<br>ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಸಂಸ್ಥೆಯ ಆವರಣದಲ್ಲಿರುವ ಉದ್ಯಾನವನಗಳ ವಾರ್ಷಿಕ ನಿರ್ವಹಣೆಯು ರೂ. 1.00 ಲಕ್ಷ ಮೀರುವುದರಿಂದ ಕೆ.ಟಿ.ಪಿ.ಪಿ ನಿಯಮಾನುಸಾರ ಇ-ಟೆಂಡರ್ ಕರೆದು ಸದರಿ ವೆಚ್ಚವನ್ನು ಬೋಧಕ ಆಸ್ಪತ್ರೆಯ ಯೂಸರ್ಸ್ ನಿಧಿಯಿಂದ ಭರಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. |
| 4 | 2020-21ನೇ ಸಾಲಿಗೆ ಬೋಧಕ ಆಸ್ಪತ್ರೆಗೆ ಅವಶ್ಯಕವಿರುವ ಔಷಧಿಗಳು (Tablets and Injections) ಸರಬರಾಜಿಗೆ ಕೆ.ಟಿ.ಪಿ.ಪಿ. ನಿಯಮಾನುಸಾರ ಇ-ಟೆಂಡರ್ ಕರೆಯುವ ಬಗ್ಗೆ. | ಹಿಮ್ಸ್ ಸಂಸ್ಥೆಯ ಬೋಧಕ ಆಸ್ಪತ್ರೆಯ ರೋಗಿಗಳ ಚಿಕಿತ್ಸೆಗೆ ಅವಶ್ಯಕವಿರುವ ಔಷಧಿಗಳ **(Tablets and Injections)** ಸರಬರಾಜಿಗೆ 2019-20ನೇ ಸಾಲಿನಲ್ಲಿ ಕೆ.ಟಿ.ಪಿ.ಪಿ ನಿಯಮಾನುಸಾರ ರೂ.465.00 ಲಕ್ಷಗಳ ವೆಚ್ಚದಲ್ಲಿ ಕರೆಯಲಾಗಿದ್ದ ಇ-ಟೆಂಡರ್ ಅವಧಿಯು ದಿನಾಂಕ:15-4-2020ರಂದು ಮುಕ್ತಾಯಗೊಳ್ಳಲಿದೆ. ಸಂಸ್ಥೆಯ ವಿವಿಧ ವಿಭಾಗಗಳ ಮುಖ್ಯಸ್ಥರುಗಳು 2020-21ನೇ ಸಾಲಿಗೆ ರೋಗಿಗಳ ಚಿಕಿತ್ಸೆ ಅವಶ್ಯಕವಿರುವ ಔಷಧಿಗಳನ್ನು **(Tablets and Injections)** ಸರಬರಾಜು ಮಾಡಿ ಕೊಡುವಂತೆ ಬೇಡಿಕೆ ಪಟ್ಟಿ ಸಲ್ಲಿಸಿದ್ದು ವಿವರ ಈ ಕೆಳಕಂಡಂತೆ ಇರುತ್ತದೆ. |

ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ - 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

<table>
<tr><th>ಅಜೆಂಡಾ ಕ್ರಮ ಸಂಖ್ಯೆ</th><th>ವಿಷಯ</th><th>ತೀರ್ಮಾನ</th></tr>
<tr><td></td><td></td><td>
<table>
<tr><th>Sl.No.</th><th>Particulars</th><th>Approximate cost Rs. In lakhs</th></tr>
<tr><td>1</td><td>Tablets</td><td>210.00</td></tr>
<tr><td>2</td><td>Injections</td><td>285.00</td></tr>
<tr><td colspan="2">Total</td><td>495.00</td></tr>
</table>
ಮುಂದುವರೆದು 2020-21ನೇ ಸಾಲಿಗೆ ರೋಗಿಗಳ ಚಿಕಿತ್ಸೆಗೆ ಅವಶ್ಯಕವಿರುವ ಔಷಧಿಗಳ ಖರೀದಿಗೆ ಅಂದಾಜು ರೂ.495.00 ಲಕ್ಷಗಳಾಗಲಿದ್ದು ಕೆ.ಟಿ.ಪಿ.ಪಿ ನಿಯಮಾನುಸಾರ ಇ-ಟೆಂಡರ್ ಕರೆಯಲು ಅನುಮೋದನೆ ನೀಡುವಂತೆ ಸಂಸ್ಥೆಯ ಆರ್ಥಿಕ ಸಲಹೆಗಾರರು ಸಭೆಯ ಮುಂದೆ ವಿಷಯವನ್ನು ಮಂಡಿಸಿದರು.<br>
ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಸಂಸ್ಥೆಯ ವಿವಿಧ ವಿಭಾಗಗಳ ಮುಖ್ಯಸ್ಥರುಗಳು ಸಲ್ಲಿಸಿರುವ ಬೇಡಿಕೆ ಪಟ್ಟಿಗೆ ಅನುಗುಣವಾಗಿ 2020-21ನೇ ಸಾಲಿಗೆ ಅವಶ್ಯಕವಿರುವ ಔಷಧಿಗಳನ್ನು (Tablets and Injections) ಅಂದಾಜು ರೂ.495.00 ಲಕ್ಷಗಳ ವೆಚ್ಚದಲ್ಲಿ ಕೆಟಿಪಿಪಿ ನಿಯಮಾನುಸಾರ ಇ-ಟೆಂಡರ್ ಕರೆಯುವುದೆಂದು ಹಾಗೂ ಸದರಿ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2210-05-105-1-49(103) ಅಡಿಯಲ್ಲಿ ಭರಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.
</td></tr>
<tr><td>5</td><td>2020-21ನೇ ಸಾಲಿಗೆ ಬೋಧಕ ಆಸ್ಪತ್ರೆಗೆ ಅವಶ್ಯಕವಿರುವ ಡಯಾಲಿಸಿಸ್ ಔಷಧಿಗಳು, ಸೂಚರ್ ಮೆಟಿರಿಯಲ್ಸ್ ಹಾಗೂ ಇತರೆ ವಸ್ತುಗಳ ಸರಬರಾಜಿಗೆ ಕೆ.ಟಿ.ಪಿ.ಪಿ. ನಿಯಮಾನುಸಾರ ಇ-ಟೆಂಡರ್ ಕರೆಯುವ ಬಗ್ಗೆ.</td><td>
ಹಿಮ್ಸ್ ಸಂಸ್ಥೆಯ ಬೋಧಕ ಆಸ್ಪತ್ರೆಯ ರೋಗಿಗಳ ಚಿಕಿತ್ಸೆಗೆ ಅವಶ್ಯಕವಿರುವ Surgical and Non Surgical Consumables / Suture Materials / Dialysis ಔಷಧಿಗಳು / Anti cancer drugs ಸರಬರಾಜಿಗೆ 2019-20ನೇ ಸಾಲಿನಲ್ಲಿ ಕೆ.ಟಿ.ಪಿ.ಪಿ ನಿಯಮಾನುಸಾರ ರೂ.376.00 ಲಕ್ಷಗಳ ವೆಚ್ಚದಲ್ಲಿ ಕರೆಯಲಾಗಿದ್ದ ಇ-ಟೆಂಡರ್ ಅವಧಿಯು ದಿನಾಂಕ:15-4-2020ರಂದು ಮುಕ್ತಾಯಗೊಳ್ಳಲಿದೆ. ಸಂಸ್ಥೆಯ ವಿವಿಧ ವಿಭಾಗಗಳ ಮುಖ್ಯಸ್ಥರುಗಳು 2020-21ನೇ ಸಾಲಿಗೆ ರೋಗಿಗಳ ಚಿಕಿತ್ಸೆ ಅವಶ್ಯಕವಿರುವ Surgical and Non Surgical Consumables / Suture Materials / Dialysis ಔಷಧಿಗಳು / Anti Cancer drugsಗಳನ್ನು ಸರಬರಾಜು ಮಾಡಿಕೊಡುವಂತೆ ಬೇಡಿಕೆ ಪಟ್ಟಿ ಸಲ್ಲಿಸಿದ್ದು ವಿವರ ಈ ಕೆಳಕಂಡಂತೆ ಇರುತ್ತದೆ.
<table>
<tr><th>Sl.No.</th><th>Particulars</th><th>Approximate cost Rs. In Lakhs</th></tr>
<tr><td>1</td><td>Surgical and Non Surgical Consumables</td><td>250.00</td></tr>
<tr><td>2</td><td>Suture Materials</td><td>65.00</td></tr>
<tr><td>3</td><td>Dialysis</td><td>55.00</td></tr>
<tr><td>4</td><td>Anti Cancer drugs</td><td>75.00</td></tr>
<tr><td colspan="2">Total</td><td>445.00</td></tr>
</table>
</td></tr>
</table>

ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ - 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

<table>
<tr><th>ಅಜೆಂಡಾ ಕ್ರಮ ಸಂಖ್ಯೆ</th><th>ವಿಷಯ</th><th>ತೀರ್ಮಾನ</th></tr>
<tr><td></td><td></td><td>ಮುಂದುವರೆದು 2020-21ನೇ ಸಾಲಿಗೆ ರೋಗಿಗಳ ಚಿಕಿತ್ಸೆಗೆ ಅವಶ್ಯಕವಿರುವ Surgical and Non Surgical Consumables / Suture Materials / Dialysis ಔಷಧಿಗಳು / Anti Cancer drugs ಗಳನ್ನು ಖರೀದಿಗೆ ಅಂದಾಜು ವೆಚ್ಚ ರೂ.445.00 ಲಕ್ಷಗಳಾಗಲಿದ್ದು ಕೆ.ಟಿ.ಪಿ.ಪಿ ನಿಯಮಾನುಸಾರ ಇ-ಟೆಂಡರ್ ಕರೆಯಲು ಅನುಮೋದನೆ ನೀಡುವಂತೆ ಸಂಸ್ಥೆಯ ಆರ್ಥಿಕ ಸಲಹೆಗಾರರು ಸಭೆಯ ಮುಂದೆ ವಿಷಯವನ್ನು ಮಂಡಿಸಿದರು.<br>ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಸಂಸ್ಥೆಯ ವಿವಿಧ ವಿಭಾಗಗಳ ಮುಖ್ಯಸ್ಥರುಗಳು ಸಲ್ಲಿಸಿರುವ ಬೇಡಿಕೆ ಪಟ್ಟಿಗೆ ಅನುಗುಣವಾಗಿ 2020-21ನೇ ಸಾಲಿಗೆ ಅವಶ್ಯಕವಿರುವ Surgical and non Surgical consumables / Suture Materials / Dialysis ಔಷಧಿಗಳು/ Anti cancer durgs ಗಳನ್ನು ಅಂದಾಜು ರೂ.445.00 ಲಕ್ಷಗಳ ವೆಚ್ಚದಲ್ಲಿ ಕೆಟಿಪಿಪಿ ನಿಯಮಾನುಸಾರ ಇ-ಟೆಂಡರ್ ಕರೆಯುವುದೆಂದು ಹಾಗೂ ಸದರಿ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2210-05-105-1-49(103) ಅಡಿಯಲ್ಲಿ ಭರಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.</td></tr>
<tr><td>6</td><td>2020-21ನೇ ಸಾಲಿಗೆ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಮತ್ತು ಸಂಸ್ಥೆಯ ಅಧೀನದಲ್ಲಿ ಬರುವ ಬೋಧಕ ಆಸ್ಪತ್ರೆಗೆ ಅಗತ್ಯವಿರುವ ರಾಸಾಯನಿಕಗಳು, ಗ್ಲಾಸ್‌ವೇರ್‌ಗಳು, ರಿಏಜೆಂಟ್ಸ್ ಕಿಟ್ಸ್ ಮತ್ತು ಡಿಸ್ಕ್‌ಗಳ ಸರಬರಾಜಿಗೆ ಸಂಬಂಧಿಸಿದಂತೆ ಇ-ಟೆಂಡರ್ ಕರೆಯುವ ಬಗ್ಗೆ.</td><td>ಹಿಮ್ಸ್ ಸಂಸ್ಥೆಯ ಬೋಧಕ ಆಸ್ಪತ್ರೆಯ ರೋಗಿಗಳ ಚಿಕಿತ್ಸೆಗೆ ಅವಶ್ಯಕವಿರುವ Chemicals / Reagents Kits / Disc /Glasswareಗಳ ಸರಬರಾಜಿಗೆ 2019-20ನೇ ಸಾಲಿನಲ್ಲಿ ಕೆ.ಟಿ.ಪಿ.ಪಿ ನಿಯಮಾನುಸಾರ ರೂ.125.00 ಲಕ್ಷಗಳ ವೆಚ್ಚದಲ್ಲಿ ಕರೆಯಲಾಗಿದ್ದ ಇ-ಟೆಂಡರ್ ಅವಧಿಯು ದಿನಾಂಕ:09-5-2020ರಂದು ಮುಕ್ತಾಯಗೊಳ್ಳಲಿದೆ. ಸಂಸ್ಥೆಯ ವಿವಿಧ ವಿಭಾಗಗಳ ಮುಖ್ಯಸ್ಥರುಗಳು 2020-21ನೇ ಸಾಲಿಗೆ ರೋಗಿಗಳ ಚಿಕಿತ್ಸೆ ಅವಶ್ಯಕವಿರುವ Chemicals / Reagents Kits / Disc / Glass ware/ VRDL (Chemicals/Reagents/ Glasswares) ಗಳನ್ನು ಸರಬರಾಜು ಮಾಡಿಕೊಡುವಂತೆ ಬೇಡಿಕೆ ಪಟ್ಟಿ ಸಲ್ಲಿಸಿದ್ದು ವಿವರ ಈ ಕೆಳಕಂಡಂತೆ ಇರುತ್ತದೆ.
<table>
<tr><th>Sl.No.</th><th>Particulars</th><th>Approximate cost Rs. In Lakhs</th></tr>
<tr><td>1</td><td>Chemicals</td><td rowspan="4">123.56</td></tr>
<tr><td>2</td><td>Reagents Kits</td></tr>
<tr><td>3</td><td>Disc</td></tr>
<tr><td>4</td><td>Glassware</td></tr>
<tr><td>5</td><td>VRDL (Chemicals/Reagents/ Glasswares)</td><td>24.00</td></tr>
<tr><td colspan="2">Total</td><td>147.56</td></tr>
</table></td></tr>
</table>



ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ - 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| | | ಮುಂದುವರೆದು 2020-21ನೇ ಸಾಲಿಗೆ ರೋಗಿಗಳ ಚಿಕಿತ್ಸೆಗೆ ಅವಶ್ಯಕವಿರುವ Chemicals / Reagents Kits / Disc/ Glassware/VRDL Chemicals/Reagents/ Glasswares ಗಳನ್ನು ಖರೀದಿಗೆ ಅಂದಾಜು ವೆಚ್ಚ ರೂ.147.56 ಲಕ್ಷಗಳಾಗಲಿದ್ದು ಕೆ.ಟಿ.ಪಿ.ಪಿ ನಿಯಮಾನುಸಾರ ಇ-ಟೆಂಡರ್ ಕರೆಯಲು ಅನುಮೋದನೆ ನೀಡುವಂತೆ ಸಂಸ್ಥೆಯ ಆರ್ಥಿಕ ಸಲಹೆಗಾರರು ಸಭೆಯ ಮುಂದೆ ವಿಷಯವನ್ನು ಮಂಡಿಸಿದರು.<br>ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಸಂಸ್ಥೆಯ ವಿವಿಧ ವಿಭಾಗಗಳ ಮುಖ್ಯಸ್ಥರುಗಳು ಸಲ್ಲಿಸಿರುವ ಬೇಡಿಕೆ ಪಟ್ಟಿಗೆ ಅನುಗುಣವಾಗಿ 2020-21ನೇ ಸಾಲಿಗೆ ಅವಶ್ಯಕವಿರುವ Chemicals / Reagents Kits / Disc / Glass ware/ VRDL Chemicals / Reagents / Glasswares ಗಳನ್ನು ಅಂದಾಜು ರೂ.147.56 ಲಕ್ಷಗಳ ವೆಚ್ಚದಲ್ಲಿ ಕೆಟಿಪಿಪಿ ನಿಯಮಾನುಸಾರ ಇ-ಟೆಂಡರ್ ಕರೆಯುವುದೆಂದು, ಕ್ರಮ ಸಂಖ್ಯೆ: 1 ರಿಂದ 4ರವರೆಗಿನ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2210-05-105-1-49(103) ಅಡಿಯಲ್ಲಿ ಭರಿಸುವುದೆಂದು ಮತ್ತು ಕ್ರಮ ಸಂಖ್ಯೆ: 5ರ ವೆಚ್ಚವನ್ನು ಕೇಂದ್ರ ಸರ್ಕಾರದಿಂದ ವಿ.ಆರ್.ಡಿ.ಎಲ್. ಯೋಜನೆಯಡಿ ಬಿಡುಗಡೆಯಾಗುವ ಅನುದಾನದಿಂದ ಭರಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. |
| 7 | ಸಂಸ್ಥೆಯ ಕೇಂದ್ರ ಗ್ರಂಥಾಲಯಕ್ಕೆ ಲೈಬ್ರರಿ ಸಾಫ್ಟ್ ವೇರ್ ಮತ್ತು RFID (Radio Frequency and Identification) ಅವಶ್ಯಕತೆ ಇರುವ ಬಗ್ಗೆ. | ಸಂಸ್ಥೆಯ ಕೇಂದ್ರ ಗ್ರಂಥಾಲಯದಲ್ಲಿರುವ ವೈದ್ಯಕೀಯ ಪುಸ್ತಕಗಳು ಮತ್ತು ನಿಯತಕಾಲಿಕೆಗಳನ್ನು Mannual ಮೂಲಕ ರೇಕಾರ್ಡ್ ಮಾಡಿ ಕಂಪ್ಯೂಟರ್‌ಗೆ ಅಳವಡಿಸಲಾಗುತ್ತಿದೆ. ಸದರಿ ಗ್ರಂಥಾಲಯದಲ್ಲಿರುವ ಪುಸ್ತಕಗಳನ್ನು ಕ್ರಮಬದ್ಧವಾಗಿ ನಿರ್ವಹಿಸಲು ಬಾರ್ ಕೋಡಿಂಗ್, ಕ್ಯಾಟಲಾಗ್, Classification ಲೈಬ್ರರಿ ಸಾಫ್ಟ್‌ವೇರ್ ಮತ್ತು RFID (Radio Frequency and identification) ಅವಶ್ಯಕತೆ ಇರುತ್ತದೆ. ಇದನ್ನು ಅಳವಡಿಸುವುದರಿಂದ ಪ್ರತಿ ಮಾಹೆ ಗ್ರಂಥಾಲಯದಲ್ಲಿರುವ ಪುಸ್ತಕಗಳನ್ನು ಹಾಗೂ ನಿಯತಕಾಲಿಕೆಗಳನ್ನು ಪರಿಶೀಲಿಸಲು ಅನುಕೂಲಕರವಾಗುತ್ತದೆಂದು ಗ್ರಂಥಪಾಲಕರು ತಿಳಿಸಿ ಇದರ ಅಳವಡಿಕೆಗೆ ಅಂದಾಜು ರೂ.12,53,000/- ಗಳಾಗುತ್ತದೆಂದು ತಿಳಿಸಿರುವ ವಿಷಯವನ್ನು ಸಂಸ್ಥೆಯ ಆರ್ಥಿಕ ಸಲಹೆಗಾರರು ಸಭೆಯ ಮುಂದೆ ವಿಷಯವನ್ನು ಮಂಡಿಸಿದರು.<br>ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಗ್ರಂಥಾಲಯ ವಿಭಾಗಕ್ಕೆ ಅವಶ್ಯಕವಿರುವ ಬಾರ್ ಕೋಡಿಂಗ್, ಕ್ಯಾಟಲಾಗ್, Classification ಲೈಬ್ರರಿ ಸಾಫ್ಟ್‌ವೇರ್ ಮತ್ತು RFID (Radio Frequency and identification) ಅಳವಡಿಸುವುದೆಂದು ತೀರ್ಮಾನಿಸಿ ಕೆ.ಟಿ.ಪಿ.ಪಿ ನಿಯಮಾನುಸಾರ ಇ-ಟೆಂಡರ್ ಕರೆದು ಅಳವಡಿಸುವುದೆಂದು ಹಾಗೂ |



ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ - 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| | | ಇದರ ವೆಚ್ಚವನ್ನು ಸಂಸ್ಥೆಯ ಯೂನಿವರ್ಸಿಟಿ ವಿಭಾಗದ ಪ್ರಾಂಶುಪಾಲರ ಬ್ಯಾಂಕ್‌ಖಾತೆಯಲ್ಲಿ ಲಭ್ಯವಿರುವ ಅನುದಾನದಲ್ಲಿ ಭರಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. |
| 8 | ಸಂಸ್ಥೆಯಲ್ಲಿ ವ್ಯಾಸಂಗ ಮಾಡುತ್ತಿರುವ ಎಂಬಿಬಿಎಸ್ ಮತ್ತು ಪಿ.ಜಿ ಎಸ್.ಸಿ/ ಎಸ್.ಟಿ ವಿದ್ಯಾರ್ಥಿಗಳಿಗೆ ಎಸ್.ಸಿ.ಪಿ/ ಟಿ.ಎಸ್.ಪಿ ಯೋಜನೆಯಲ್ಲಿ ಬಿಡುಗಡೆಯಾಗಿರುವ ಅನುದಾನದಲ್ಲಿ ವಿದ್ಯಾರ್ಥಿಗಳಿಗೆ ವೈದ್ಯಕೀಯ ಪುಸ್ತಕಗಳನ್ನು ಮತ್ತು ಲ್ಯಾಪ್‌ಟಾಪ್, ಸ್ಟೆತೋಸ್ಕೋಪ್ ಹಾಗೂ ಬಿ.ಪಿ. ಮಾನಿಟರ್‌ಗಳನ್ನು ಇ-ಟೆಂಡರ್ ಮೂಲಕ ಸರಬರಾಜು ಪಡೆಯುವ ಬಗ್ಗೆ. | ಸಂಸ್ಥೆಯಲ್ಲಿ ಎಂಬಿಬಿಎಸ್ ಮತ್ತು ಸ್ನಾತಕೋತ್ತರ ಪದವಿ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಎಸ್.ಸಿ/ ಎಸ್.ಟಿ ವಿದ್ಯಾರ್ಥಿಗಳಿಗೆ ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆಯಡಿ ಸರ್ಕಾರದಿಂದ ರೂ.63.5 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ಸದರಿ ಅನುದಾನವನ್ನು ವಿದ್ಯಾರ್ಥಿಗಳಿಗೆ ಅವಶ್ಯವಿರುವ ವೈದ್ಯಕೀಯ ಪುಸ್ತಕಗಳು, ಸ್ಟೆತೋಸ್ಕೋಪ್, ಬಿ.ಪಿ.ಆಪರೇಟರ್ ಮತ್ತು ಲ್ಯಾಪ್‌ಟಾಪ್ ವಿತರಿಸಲು ಬಳಸಿಕೊಳ್ಳುವಂತೆ ಸರ್ಕಾರದಿಂದ ನಿರ್ದೇಶನವಿದ್ದು, ಅಗತ್ಯ ವಸ್ತುಗಳನ್ನು ಕೆ.ಟಿ.ಪಿ.ಪಿ. ನಿಯಮಾನುಸಾರ ಇ-ಟೆಂಡರ್ ಕರೆಯುವ ಬಗ್ಗೆ ಅನುಮೋದನೆ ನೀಡುವಂತೆ ಸಂಸ್ಥೆಯ ಆರ್ಥಿಕ ಸಲಹೆಗಾರರು ಸಭೆಯ ಮುಂದೆ ಮಂಡಿಸಿದರು.<br>ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನದಲ್ಲಿ ವೈದ್ಯಕೀಯ ವಿದ್ಯಾರ್ಥಿಗಳಿಗೆ ಅವಶ್ಯಕವಿರುವ ವೈದ್ಯಕೀಯ ಪುಸ್ತಕಗಳು, ಸ್ಟೆತೋಸ್ಕೋಪ್, ಬಿ.ಪಿ.ಆಪರೇಟರ್ ಮತ್ತು ಲ್ಯಾಪ್‌ಟಾಪ್‌ಗಳನ್ನು ಕೆ.ಟಿ.ಪಿ.ಪಿ ನಿಯಮಾನುಸಾರ ಇ-ಟೆಂಡರ್ ಮೂಲಕ ಖರೀದಿಸುವುದೆಂದು ಸದರಿ ವೆಚ್ಚವನ್ನು ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆಯಡಿ ಬಿಡುಗಡೆಯಾಗಿರುವ ಅನುದಾನದಲ್ಲಿ ಭರಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. |
| 9 | ಸಂಸ್ಥೆಯ ಬೋಧಕ ಅಸ್ಪತ್ರೆಯ ಒಳ ರೋಗಿಗಳಿಗೆ ಪಥ್ಯಾಹಾರ ವಿಭಾಗಕ್ಕೆ 2020-21ನೇ ಸಾಲಿಗೆ ಅಗತ್ಯವಿರುವ ಆಹಾರ ಪದಾರ್ಥಗಳನ್ನು ಮತ್ತು ಪ್ರಥಮ ದರ್ಜೆ ಬ್ರೆಡ್‌ನ್ನು ಇ-ಟೆಂಡರ್ ಮೂಲಕ ಸರಬರಾಜು ಪಡೆಯುವ ಬಗ್ಗೆ. | ಸಂಸ್ಥೆಯ ಬೋಧಕ ಆಸ್ಪತ್ರೆಯ ಒಳ ರೋಗಿ ವಿಭಾಗದ ಪಥ್ಯಾಹಾರ ವಿಭಾಗಕ್ಕೆ ಅಗತ್ಯವಿರುವ ಆಹಾರ ಪದಾರ್ಥಗಳನ್ನು ಮತ್ತು ಪ್ರಥಮದರ್ಜೆ ಬ್ರೆಡ್ ಸರಬರಾಜಿಗೆ ಕರೆಯಲಾಗಿದ್ದ ಟೆಂಡರ್ ಅವಧಿಯು ದಿನಾಂಕ:20-8-2020 ರಂದು ಮುಕ್ತಾಯವಾಗುತ್ತಿದ್ದು 2020-21ನೇ ಸಾಲಿಗೆ 750 ಹಾಸಿಗೆಗಳ ಸಾಮರ್ಥ್ಯಕ್ಕೆ ಅನುಗುಣವಾಗಿ ಅವಶ್ಯಕವಿರುವ ಆಹಾರ ಪದಾರ್ಥಗಳನ್ನು ಮತ್ತು ಪ್ರಥಮ ದರ್ಜೆ ಬ್ರೆಡ್‌ನ್ನು ಸರಬರಾಜಿನ ವಿವರ ಈ ಕೆಳಕಂಡಂತೆ ಇದ್ದು ಕೆ.ಟಿ.ಪಿ.ಪಿ ನಿಯಮಾನುಸಾರ ಇ-ಟೆಂಡರ್ ಕರೆಯಲು ಅನುಮೋದನೆ ನೀಡುವಂತೆ ಸಂಸ್ಥೆಯ ಆರ್ಥಿಕ ಸಲಹೆಗಾರರು ಸಭೆಯ ಮುಂದೆ ಮಂಡಿಸಿದರು.<br><br>ಕ್ರಮ ಸಂಖ್ಯೆ \| ವಿವರ \| 2020-21ರ ಅವಧಿಯ ಟೆಂಡರ್ ಅಂದಾಜು ಮೊತ್ತ ರೂ ಲಕ್ಷಗಳಲ್ಲಿ<br>1 \| ಆಹಾರ ಪದಾರ್ಥಗಳು \| 175.00<br>2 \| ಪ್ರಥಮ ದರ್ಜೆ ಬ್ರೆಡ್ \| |



ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ - 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| | | ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಪ್ರಸ್ತುತ ಒಳರೋಗಿಗಳಿಗೆ ಬೆಳಗ್ಗೆ ಹಾಲು – ಬ್ರೆಡ್, ಮಧ್ಯಾಹ್ನ ಹಾಗೂ ರಾತ್ರಿ ಊಟ ನೀಡಲಾಗುತ್ತಿರುವುದರ ಬಗ್ಗೆ ಪರಾಮರ್ಶಿಸಿ ರೋಗಿಗಳಿಗೆ ಬೆಳಗ್ಗೆ ವಿತರಿಸುತ್ತಿರುವ ಹಾಲು-ಬ್ರೆಡ್ ಬದಲಿಗೆ ಲಘು ಉಪಹಾರ, ಮಧ್ಯಾಹ್ನ ಮತ್ತು ರಾತ್ರಿ ಊಟ ನೀಡುವುದರ ಬಗ್ಗೆ ಯೋಜನೆ ರೂಪಿಸಲು ಅಥವಾ ಕಾಲವಕಾಶ ಕಡಿಮೆ ಇದ್ದಲ್ಲಿ ಹಿಂದಿನ ಪಥ್ಯಾಹಾರ ಪದ್ಧತಿಯನ್ನೇ ಮುಂದುವರೆಸಿ ಮುಂದಿನ ಸಾಲಿನಲ್ಲಿ ಕ್ರಮವಹಿಸಬಹುದೆಂದು ನಿರ್ಣಯಿಸಲಾಯಿತು ಹಾಗೂ ಸದರಿ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2210-05-105-1-49 (103) ಅಡಿಯಲ್ಲಿ ಬಿಡುಗಡೆಯಾಗುವ ಅನುದಾನದಲ್ಲಿ ಭರಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. |
| 10 | ಸಂಸ್ಥೆಯ ರಕ್ತ ನಿಧಿ ವಿಭಾಗದಲ್ಲಿ ಶೇಖರಣೆಯಾಗುವ Fresh Frozen Plasmaನ್ನು 2020-21ನೇ ಸಾಲಿಗೆ ವಿಲೇವಾರಿ ಮಾಡಲು ದರಗಳನ್ನು ಇ-ಟೆಂಡರ್ ಮೂಲಕ ನಿಗದಿಪಡಿಸುವ ಬಗ್ಗೆ. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ ಸಂಸ್ಥೆಯ ಬೋದಕ ಆಸ್ಪತ್ರೆಯ ರಕ್ತ ನಿಧಿ ವಿಭಾಗದಲ್ಲಿ ವಿವಿಧ ರಕ್ತದಾನ ಶಿಬಿರಗಳಲ್ಲಿ ಸಂಗ್ರಹವಾಗುವ ರಕ್ತದ ಬಾಟಲ್‌ಗಳನ್ನು ಆಸ್ಪತ್ರೆಯ ರಕ್ತನಿಧಿ ವಿಭಾಗದಲ್ಲಿ ಶೇಖರಿಸಿ ರಕ್ತವನ್ನು ಪ್ರತ್ಯೇಕಿಸಿದಾಗ ಅದರಿಂದ ಬೇರ್ಪಟ್ಟ Fresh Frozen Plasmaನ್ನು ಪ್ರತ್ಯೇಕವಾಗಿ ಶೇಖರಿಸಿ 2019-20ನೇ ಸಾಲಿಗೆ ಹೆಚ್-1 ದರ ರೂ 2,700/- ಪ್ರತಿ ಲೀಟರ್ ದರದಂತೆ ವಿಲೇವಾರಿ ಮಾಡಲಾಗುತ್ತಿದ್ದು, ಸದರಿ ಟೆಂಡರ್ ಅವಧಿಯು ದಿನಾಂಕ :31-3-2020 ರಂದು ಮುಕ್ತಾಯವಾಗುತ್ತಿರುವುದರಿಂದ 2020-21 ನೇ ಸಾಲಿನಲ್ಲಿ ಶೇಖರಣೆಯಾಗುವ Fresh Frozen Plasmaನ್ನು ವಿಲೇವಾರಿ ಮಾಡಲು ಇ-ಟೆಂಡರ್ ಕರೆಯಲು ಅನುಮೋದನೆ ನೀಡುವಂತೆ ಸಂಸ್ಥೆಯ ಆರ್ಥಿಕ ಸಲಹೆಗಾರರು ಸಭೆಯ ಮುಂದೆ ಮಂಡಿಸಿದರು.<br>ಸದರಿ ವಿಷಯವನ್ನು ಕೂಲಂಕಷವಾಗಿ ಚರ್ಚಿಸಿ 2020-21ನೇ ಸಾಲಿನಲ್ಲಿ ಶೇಖರಣೆಯಾಗುವ Fresh Frozen Plasmaನ್ನು ವಿಲೇವಾರಿ ಮಾಡಲು ಹೆಚ್ಚಿನ ದರ ನಿಗದಿಪಡಿಸಿ ಕೆ.ಟಿ.ಪಿ.ಪಿ ನಿಯಮಾನುಸಾರ ಇ-ಟೆಂಡರ್ ಕರೆಯುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. |
| 11 | ಸಂಸ್ಥೆಯ ಭೋದಕ ಆಸ್ಪತ್ರೆ ಕಟ್ಟಡ, ಕಾಲೇಜು ಕಟ್ಟಡ, ವೈದ್ಯರ ವಸತಿ ಗೃಹ, ಮತ್ತು ವಿದ್ಯಾರ್ಥಿ ನಿಲಯಗಳಲ್ಲಿ ಶೇಖರಣೆಯಾಗುವ ಸಾಮಾನ್ಯ ತ್ಯಾಜ್ಯ ಮತ್ತು ಆಹಾರ ತ್ಯಾಜ್ಯವನ್ನು | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ ಸಂಸ್ಥೆಯ ಬೋಧಕ ಆಸ್ಪತ್ರೆ ಕಟ್ಟಡ, ಕಾಲೇಜು ಕಟ್ಟಡ, ವೈದ್ಯರ ವಸತಿ ಗೃಹ, ಮತ್ತು ವಿದ್ಯಾರ್ಥಿ ನಿಲಯಗಳಲ್ಲಿ ಶೇಖರಣೆಯಾಗುವ ಸಾಮಾನ್ಯ ತ್ಯಾಜ್ಯ ಮತ್ತು ಆಹಾರ ತ್ಯಾಜ್ಯವನ್ನು 2019-20ನೇ ಸಾಲಿನಲ್ಲಿ ಮಾಹೆಯಾನ ರೂ.32,250.00 ರೂಗಳಂತೆ ಕರೆಯಲಾಗಿದೆ ಇ-ಟೆಂಡರ್ ಅವಧಿಯು ಮಾರ್ಚ್ -2020ಕ್ಕೆ ಮುಕ್ತಾಯಗೊಳ್ಳುತ್ತಿದ್ದು 2020-12ನೇ ಸಾಲಿಗೆ ಸಂಸ್ಥೆಯಲ್ಲಿ ಸಂಗ್ರಹವಾಗುವ ಸಾಮಾನ್ಯ ತ್ಯಾಜ್ಯ ಮತ್ತು ಆಹಾರ ತ್ಯಾಜ್ಯವನ್ನು ವಿಲೇವಾರಿ ಮಾಡಲು ಇ-ಟೆಂಡರ್ ಕರೆಯಲು ಅನುಮೋದನೆ ನೀಡುವಂತೆ ಸಂಸ್ಥೆಯ ಆರ್ಥಿಕ ಅಧಿಕಾರಿಗಳು ಸಭೆಯ ಮುಂದೆ ಮಂಡಿಸಿದರು. |



ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ - 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| | 2020–21ನೇ ಸಾಲಿಗೆ ವಿಲೇವಾರಿ ಮಾಡಲು ದರಗಳನ್ನುಇ–ಟೆಂಡರ್ ಮೂಲಕ ನಿಗದಿಪಡಿಸುವ ಬಗ್ಗೆ. | ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ 2020–21ನೇ ಸಾಲಿನಲ್ಲಿ ಸಂಸ್ಥೆಯಲ್ಲಿ ಸಂಗ್ರಹವಾಗುವ ಸಾಮಾನ್ಯ ತ್ಯಾಜ್ಯ ಮತ್ತು ಆಹಾರ ತ್ಯಾಜ್ಯವನ್ನು ವಿಲೇವಾರಿ ಮಾಡಲು ಕೆ.ಟಿ.ಪಿ.ಪಿ ನಿಯಮನುಸಾರ ಇ–ಟೆಂಡರ್ ಕರೆಯುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. |
| 12 | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ವಿವಿಧ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರ ವೈದ್ಯಕೀಯ ವೆಚ್ಚದ ಅರ್ಹ ಬಾಬ್ತನ್ನು ಪಾವತಿಸಲು ಅನುಮೋದನೆ ಪಡೆಯುವ ಬಗ್ಗೆ. | ಸಂಸ್ಥೆಯ ಸಿಬ್ಬಂದಿ ವರ್ಗದವರ ವೈದ್ಯಕೀಯ ವೆಚ್ಚದ ಮರುಪಾವತಿಯ ಬಿಲ್ಲುಗಳನ್ನು ಸಂಸ್ಥೆಯ ವೈದ್ಯಕೀಯ ಮಂಡಳಿಯಿಂದ ಪರಿಶೀಲಿಸಿ, ಅರ್ಹ ಮೊತ್ತಕ್ಕೆ ಮೇಲು ಸಹಿಯೊಂದಿಗೆ ದೃಢೀಕರಿಸಿರುತ್ತಾರೆ. ಹಾಗೂ ಸರ್ಕಾರಿ ಆದೇಶ ಸಂಖ್ಯೆ: ಆಕುಕ 292 ಎಂಎಸ್ಎಫ್ 2015(2) ದಿನಾಂಕ:09-11-2015ರ ಆದೇಶದಲ್ಲಿ ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಇವರು ಶಿಫಾರಸ್ಸು ಮಾಡಿರುವ ಮೊತ್ತವನ್ನು ಮರಪಾವತಿಸುವ ಬಗ್ಗೆ ಸಂಸ್ಥೆಯ ಆರ್ಥಿಕ ಸಮಿತಿಯ ಅನುಮೋದನೆ ಪಡೆದು ತದನಂತರ ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸಿ ವೈದ್ಯಕೀಯ ವೆಚ್ಚ ಮರುಪಾವತಿಗೆ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ನಿರ್ದೇಶನವಿರುವುದರಿಂದ ಕೆಳಕಂಡ ಸಿಬ್ಬಂದಿ ವರ್ಗದವರ ವೈದ್ಯಕೀಯ ವೆಚ್ಚದ ಬಿಲ್ಲು ಮೊತ್ತವನ್ನು ಪಾವತಿಸಲು ಅನುಮೋದನೆ ನೀಡುವಂತೆ ಸಂಸ್ಥೆಯ ಆರ್ಥಿಕ ಅಧಿಕಾರಿಗಳು ಸಂಸ್ಥೆಯ ಆರ್ಥಿಕ ಸಲಹೆಗಾರರು ಸಭೆಯ ಮುಂದೆ ಮಂಡಿಸಿದರು. |

| ಕ್ರ ಸಂ | ಹೆಸರು | ನೌಕರರಿಗೆ ರೋಗಿಯ ಸಂಬಂಧ ಹಾಗೂ ವೈದ್ಯಕೀಯ ಚಿಕಿತ್ಸೆ ಪಡೆದ ಆಸ್ಪತ್ರೆ | ಖಾಯಿಲೆಯ ವಿವರ | ಮರುಪಾವತಿಗಾಗಿ ಸಲ್ಲಿಸಿದ ಮೊತ್ತ | ಪಾವತಿಸಲು ದೃಢೀಕರಿಸಿರುವ ಅರ್ಹ ಮೊತ್ತ |
|---|---|---|---|---|---|
| 1 | ಡಾ.ಉಮಾದೇವಿ. ಹೆಚ್.ಆರ್. ಚರ್ಮ ರೋಗ ತಜ್ಞರು | ಸ್ವಂತ ಶ್ರೀ ಚಾಮರಾಜೇಂದ್ರ ಆಸ್ಪತ್ರೆ, ಹಾಸನ. | ಸಕ್ಕರೆ ಖಾಯಿಲೆ ಮತ್ತು ಬಿ.ಪಿ | 6450<br>14568<br>21018 | 6,250–00<br>14,243–00<br>20,493–00 |
| 2 | ಪಾರ್ವತಮ್ಮ ಹೆಚ್.ಎನ್. ಕಛೇರಿ ಅಧೀಕ್ಷಕರು | ಸ್ವಂತ ಶ್ರೀ ಚಾಮರಾಜೇಂದ್ರ ಆಸ್ಪತ್ರೆ ಹಾಸನ. | ಸಕ್ಕರೆ ಖಾಯಿಲೆ ಮತ್ತು ಬಿ.ಪಿ. | 3080<br>3382 | 2,380–00<br>3,182–00 |
| 3 | ಅನಿತ. ಹೆಚ್.ಜಿ. ಪ್ರ.ದ.ಸ. | ಸ್ವಂತ ಶ್ರೀ ಚಾಮರಾಜೇಂದ್ರ ಆಸ್ಪತ್ರೆ, ಹಾಸನ. | ಗರ್ಭಿಣಿ ಚಿಕಿತ್ಸೆ | 9398<br>691<br>10089 | 6,872–00<br>334–00<br>7,206–00 |
| 4 | ಸೋನಿ.ಎಂ.ಸಿ. ಶುಶ್ರೂಷಕರು | ಸ್ವಂತ ಸೆಂಟ್‌ಜಾನ್ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆ, ಬೆಂಗಳೂರು | CA Left Breast | 2395 | 1,995–00 |



ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ – 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|

| | | | | | |
|---|---|---|---|---|---|
| 5 | ಪ್ರಮೀಳ ಲೋಬೊ<br>ಶುಶ್ರೂಷಕಿ | ಸ್ವಂತ<br>ಮಣಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಹಾಸನ. | Fibroid Uterus | 45108 | 19,995–00 |
| 6 | ಸಂದೀಪ್.ಎ.ಬಿ.<br>ಶುಶ್ರೂಷಕರು | ಪತ್ನಿ<br>ಲಕ್ಷ್ಮೀ ಆಸ್ಪತ್ರೆ, ಕಡೂರು | LCSC | 29207 | 9,916–00 |
| 7 | ಹೇಮಂತ್ ಕುಮಾರ್.ಹೆಚ್.ಸಿ.<br>ಶುಶೂಶ್ರಕರು | ಸ್ವಂತ<br>ಹೆಚ್.ಸಿ.ಜಿ.ಆಸ್ಪತ್ರೆ, ಬೆಂಗಳೂರು. | Chronic Myeloid Leukemia | 22500 | 22,300–00 |
| 8 | ಮಧುಸೂಧನ್.ಯು.ಎನ್.<br>ವಾಹನ ಚಾಲಕ | ಪತ್ನಿ<br>ಜನ ಪ್ರಿಯ ಆಸ್ಪತ್ರೆ, ಹಾಸನ. | LCSC | 31270 | 9,916–00 |
| 9 | ಶೋಭ.ಬಿ.ಪಿ.<br>ಪ್ರ.ದ.ಸ., | ಸ್ವಂತ<br>ಹೇಮಾವತಿ ಆಸ್ಪತ್ರೆ, ಹಾಸನ. | IVAP-LTS | 74025 | 46,274–00 |
| | **ಒಟ್ಟು ಮೊತ್ತ** | | | | **1,43657–00** |

ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ ವೈದ್ಯಕೀಯ ಸೇವೆಗಳ ಚಿಕಿತ್ಸಾ ವೆಚ್ಚವನ್ನು ಅರ್ಹ ಸಿಬ್ಬಂದಿಯವರಿಗೆ ಮರುಪಾವತಿ ಮಾಡಬಹುದೆಂದು ಹಾಗೂ ಸದರಿ ವೆಚ್ಚವನ್ನು ಸರ್ಕಾರದಿಂದ ಬಿಡುಗಡೆಯಾಗುವ ಲೆಕ್ಕಶೀರ್ಷಿಕೆ2210–05–105–1–49–103ರ ಅಡಿಯಲ್ಲಿ ಭರಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು ಹಾಗೂ ಇನ್ನು ಮುಂದೆ ರೂ.1.00 ಲಕ್ಷಗಳ ಒಳಗೆ ಬರುವ ವೈದ್ಯಕೀಯ ಸೇವೆಗಳ ಚಿಕಿತ್ಸಾ ವೆಚ್ಚವನ್ನು ಮಾತ್ರ ಅರ್ಹ ಸಿಬ್ಬಂದಿಯವರಿಗೆ ಸಂಸ್ಥೆಯ ಹಂತದಲ್ಲಿಯೇ ಪಾವತಿಸಿ ನಂತರ ಆರ್ಥಿಕ ಸಮಿತಿ ಮತ್ತು ಆಡಳಿತ ಮಂಡಳಿ ಸಭೆಯಲ್ಲಿ ಅನುಮೋದನೆ ಪಡೆಯುವಂತೆ ಸೂಚಿಸಲಾಯಿತು. ರೂ.1.00 ಲಕ್ಷಕ್ಕಿಂತ ಅಧಿಕವಾದಲ್ಲಿ ಸರ್ಕಾರದಿಂದ ಅನುಮೋದನೆ ಪಡೆಯುವಂತೆ ಸೂಚಿಸಲಾಯಿತು.

| | | |
|---|---|---|
| 13 | ಬೋಧಕ ಆಸ್ಪತ್ರೆಯ ಆವರಣದಲ್ಲಿ ರೋಗಿಗಳು ಮತ್ತು ಸಂಬಂಧಿಕರ ಉಪಯೋಗಕ್ಕಾಗಿ ಒಂದು ಸಾವಿರ ಲೀಟರ್ ಸಾಮರ್ಥ್ಯದ ಕುಡಿಯ ನೀರಿನ ಆರ್.ಓ ಪ್ಲಾಂಟ್ ನಿರ್ಮಾಣ ಮಾಡಲು ಕರ್ನಾಟಕ | ಬೋಧಕ ಆಸ್ಪತ್ರೆಯ ಆವರಣದಲ್ಲಿ ರೋಗಿಗಳು ಮತ್ತು ಸಂಬಂಧಿಕರ ಉಪಯೋಗಕ್ಕಾಗಿ ಒಂದು ಸಾವಿರ ಲೀಟರ್ ಸಾಮರ್ಥ್ಯದ ಕುಡಿಯ ನೀರಿನ 02 ಆರ್.ಓ ಪ್ಲಾಂಟ್ ನಿರ್ಮಾಣ ಮಾಡಲು ಸಿ.ಎಸ್.ಆರ್. ಯೋಜನೆಯಡಿ ಅನುದಾನ ಬಿಡುಗಡೆ ಮಾಡುವಂತೆ ಕೋರಿ ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಷನ್ ಲಿಮಿಟೆಡ್ ಬೆಂಗಳೂರು ಇವರಿಗೆ ಪತ್ರ ಬರೆಯಲಾಗಿತ್ತು. ಸದರಿ ಸಂಸ್ಥೆಯವರು ಘಟಕದ ನಿರ್ಮಾಣಕ್ಕೆ ತಗಲುವ ವೆಚ್ಚ ರೂ.13.00 ಲಕ್ಷಗಳಿಗೆ ಷರತ್ತಿಗೆ ಒಳಪಟ್ಟು ಅನುಮೋದನೆ ನೀಡಿ ಮೊದಲನೇ ಕಂತಿನಲ್ಲಿ ರೂ.6.5 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಿದ್ದು 02 ಆರ್.ಓ ಪ್ಲಾಂಟ್ ನಿರ್ಮಾಣ ಮಾಡಲು ತಗಲುವ ವೆಚ್ಚಕ್ಕೆ ಅಂದಾಜು ಪಟ್ಟಿ ಸಲ್ಲಿಸುವಂತೆ ಕಾರ್ಯಪಾಲಕ ಅಭಿಯಂತರರು |



ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ – 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

<table>
<tr><th>ಅಜೆಂಡಾ ಕ್ರಮ ಸಂಖ್ಯೆ</th><th>ವಿಷಯ</th><th>ತೀರ್ಮಾನ</th></tr>
<tr><td></td><td>ಸ್ಟೇಟ್ ಮಿನರಲ್ಸ್ ಕಾರ್ಪೋರೇಷನ್ ಲಿಮಿಟೆಡ್‌ಬೆಂಗಳೂರು ಇವರಿಂದ ರೂ.13.00 ಲಕ್ಷಗಳಿಗೆ ಅನುಮೋದನೆ ದೊರೆತಿರುವ ಬಗ್ಗೆ.</td><td>ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಇವರಿಗೆ ಪತ್ರ ಬರೆಯಲಾಗಿರುತ್ತದೆಂಬ ಮಾಹಿತಿಯನ್ನು ಆರ್ಥಿಕ ಸಲಹೆಗಾರರು ಸಭೆಯ ಮುಂದೆ ಮಂಡಿಸಿದರು.<br>ಸದರಿ ವಿಷಯವನ್ನು ಕೂಲಂಕಷವಾಗಿ ಚರ್ಚಿಸಿ ಸರ್ವಾನುಮತದಿಂದ ಒಪ್ಪಿ ಅನುಮೋದಿಸಲಾಯಿತು.</td></tr>
<tr><td>14</td><td>ಬೋಧಕ ಆಸ್ಪತ್ರೆಗೆ ಅವಶ್ಯಕವಿರುವ ಉಪಕರಣಗಳು, ಪೀಠೋಪಕರಣಗಳು ಹಾಗೂ ಇತರೆ ಪರಿಕಾರಕಗಳನ್ನು ಖರೀದಿಸಿಕೊಡುವಂತೆ ವೈದ್ಯಕೀಯ ಅಧೀಕ್ಷಕರು ಸಲ್ಲಿಸಿರುವ ಬೇಡಿಕೆ ಪಟ್ಟಿಯ ಬಗ್ಗೆ</td><td>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ ಸಂಸ್ಥೆಯ ಭೋದಕ ಆಸ್ಪತ್ರೆಯು 750 ಹಾಸಿಗೆಗಳನ್ನು ಒಳಗೊಂಡಿದ್ದು, ಆಸ್ಪತ್ರೆಗೆ ಬರುವ ರೋಗಿಗಳ ಸಂಖ್ಯೆ ಹೆಚ್ಚಾಗಿರುವುದರಿಂದ, ವಿವಿಧ ವಿಭಾಗಗಳ ಉಪಯೋಗಕ್ಕೆ ಕೆಳಕಂಡ ಉಪಕರಣ ಮತ್ತು ಸಲಕರಣೆಗಳು ಅತೀ ಅವಶ್ಯಕತೆ ಇರುವುದರಿಂದ ಕೆಳಕಂಡ ಉಪಕರಣಗಳನ್ನು ಖರೀದಿಸಲು ಅಂದಾಜು ರೂ.277.00 ಲಕ್ಷ ವೆಚ್ಚವಾಗಲಿದ್ದು ಸದರಿ ವೈದ್ಯಕೀಯ ಉಪಕರಣಗಳನ್ನು ಸರಬರಾಜು ಮಾಡಿಕೊಡುವಂತೆ ವೈದ್ಯಕೀಯ ಅಧೀಕ್ಷಕರು ಸಲ್ಲಿಸಿದ್ದ ಮನವಿ ಪತ್ರವನ್ನು ಸಂಸ್ಥೆಯ ಆರ್ಥಿಕ ಆರ್ಥಿಕ ಸಲಹೆಗಾರರು ಸಭೆಯ ಮುಂದೆ ಮಂಡಿಸಿದರು.
<table>
<tr><th>ಕ್ರ ಸಂ</th><th>ವಿವರ</th><th>ಪ್ರಮಾಣ</th><th>ಅಂದಾಜು ದರ</th><th>ಒಟ್ಟು ಮೊತ್ತ</th></tr>
<tr><td>01</td><td>3 Seated Waiting Chairs</td><td>200</td><td>8,500.00</td><td>17,00,000.00</td></tr>
<tr><td>02</td><td>Pallet Rack for Pharmacy Department 3 steps</td><td>25</td><td>50,000.00</td><td>12,50,000.00</td></tr>
<tr><td>03</td><td>Movabale Rack for MRD</td><td>25</td><td>20,000.00</td><td>5,00,000.00</td></tr>
<tr><td>04</td><td>Ventilators</td><td>5</td><td>18,00,000.00</td><td>90,00,000.00</td></tr>
<tr><td>05</td><td>Monitors</td><td>20</td><td>85,000.00</td><td>17,00,000.00</td></tr>
<tr><td>06</td><td>Syringe Pump</td><td>20</td><td>63,000.00</td><td>12,60,000.00</td></tr>
<tr><td>07</td><td>Infusion Pump</td><td>20</td><td>60,000.00</td><td>12,00,000.00</td></tr>
<tr><td>08</td><td>C-Arm</td><td>2</td><td>15,00,000.00</td><td>30,00,000.00</td></tr>
<tr><td>09</td><td>OT Light</td><td>5</td><td>2,50,000.00</td><td>12,50,000.00</td></tr>
<tr><td>10</td><td>Basic Surgery Instruments Set for Ortho</td><td>4</td><td>4,00,000.00</td><td>16,00,000.00</td></tr>
<tr><td>11</td><td>Basic Surgery Instruments Set for OBG and Surgery</td><td>30</td><td>50,000.00</td><td>15,00,000.00</td></tr>
<tr><td>12</td><td>Urology Instruments</td><td>-</td><td>-</td><td>50,00,000.00</td></tr>
<tr><td></td><td colspan="3">Total</td><td>2,77,10,000.00</td></tr>
</table>
ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಲಾಯಿತು. ರೋಗಿಗಳ ಚಿಕಿತ್ಸಾ ಹಿತದೃಷ್ಟಿಯಿಂದ ಮೇಲ್ಕಂಡ ಉಪಕರಣಗಳು ಅವಶ್ಯವೆಂದು ವೈದ್ಯಕೀಯ ಅಧೀಕ್ಷಕರು ಸಲ್ಲಿಸಿದ್ದ ಮನವಿಯನ್ನು ಪರಿಗಣಿಸಿ ಸದರಿ ಉಪಕರಣಗಳನ್ನು</td></tr>
</table>



ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ - 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| | | ಕೆ.ಟಿ.ಪಿ.ಪಿ ನಿಯಮಾನುಸಾರ ಇ-ಟೆಂಡರ್ ಕರೆಯುವುದೆಂದು ಹಾಗೂ ಸದರಿ ವೆಚ್ಚವನ್ನು ಯೂಸರ್ಸ್ ನಿಧಿಯಿಂದ ಪಾವತಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. |
| 15 | ಬೋಧಕ ಆಸ್ಪತ್ರೆಗೆ ಚಿಕಿತ್ಸೆಗೆ ಬರುವ ರೋಗಿಗಳಿಗೆ ತರ್ತು ಸಂದರ್ಭಗಳಲ್ಲಿ ಇತರೆ ಸ್ಥಳಗಳಿಗೆ ವೈದ್ಯಕೀಯ ಚಿಕಿತ್ಸೆಗೆ ಕಳುಹಿಸಲು ಅನುಕೂಲವಾಗುವಂತೆ 2 ಅಂಬುಲೆನ್ಸ್ ವಾಹನಗಳನ್ನು ಖರೀದಿಸಿ ಕೊಡುವಂತೆ ವೈದ್ಯಕೀಯ ಅಧೀಕ್ಷಕರು ಸಲ್ಲಿಸಿರುವ ಬೇಡಿಕೆಯ ಪಟ್ಟಿಯ ಬಗ್ಗೆ. | ಸಂಸ್ಥೆಯ ಬೋಧಕಕ ಆಸ್ಪತ್ರೆಯ ಒಳರೋಗಿಗಳ ಸಂಖ್ಯೆ ಹೆಚ್ಚಾಗಿದ್ದು, ತುರ್ತು ಸಂದರ್ಭದಲ್ಲಿ ಹೆಚ್ಚಿನ ಚಿಕಿತ್ಸೆಗಾಗಿ ಬೇರೆ ಆಸ್ಪತ್ರೆಗಳಿಗೆ ರೋಗಿಗಳನ್ನು ಕಳುಹಿಸಿಕೊಡಲು ಮತ್ತು ಪ್ರೋಟೋಕಾಲ್‌ಗಳಿಗೆ ಅಂಬುಲೆನ್ಸ್‌ನ್ನು ನಿಯೋಜನೆ ಮಾಡಲು ಹಾಲಿ ಇರುವ ಆಂಬುಲೆನ್ಸ್ ವಾಹನಗಳು ತುಂಬಾ ಹಳೆಯದಾಗಿದ್ದು, ಪದೇ ಪದೇ ರಿಪೇರಿಗೆ ಬರುತ್ತಿರುವುದರಿಂದ ಅವುಗಳನ್ನು ಬಳಸಲು ಯೋಗ್ಯವಾಗಿರುವುದಿಲ್ಲ. ತಲಾ ಒಂದು ಆಂಬುಲೆನ್ಸ್ ವಾಹನ ಖರೀದಿಗೆ ರೂ.11.50 ಲಕ್ಷಗಳಂತೆ 2 ವಾಹನಗಳಿಗೆ ಒಟ್ಟು ರೂ.23.00 ಲಕ್ಷಗಳಾಗಲಿದ್ದು 2 ಆಂಬುಲೆನ್ಸ್ ವಾಹನಗಳನ್ನು ಖರೀದಿಸಿಕೊಡುವಂತೆ ವೈದ್ಯಕೀಯ ಅಧೀಕ್ಷಕರು ಮನವಿ ಸಲ್ಲಿಸಿರುವುದನ್ನು ಆರ್ಥಿಕ ಸಲಹೆಗಾರರು ಸಭೆಯ ಮುಂದೆ ಮಂಡಿಸಿದರು.<br>ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ರೋಗಿಗಳ ಚಿಕಿತ್ಸೆಗೆ ಹಾಗೂ ಪ್ರೋಟಕಾಲ್‌ಗಳಿಗೆ ಅನುಕೂಲವಾಗುವಂತೆ 2 ಅಂಬುಲೆನ್ಸ್ ವಾಹನಗಳನ್ನು ನಿಯಮಾನುಸಾರ ಖರೀದಿಸುವುದೆಂದು ಹಾಗೂ ಸದರಿ ವೆಚ್ಚವನ್ನು ಬೋಧಕ ಆಸ್ಪತ್ರೆಯ ಯೂಸರ್ಸ್ ನಿಧಿಯಿಂದ ಭರಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. |
| 16 | ಸಂಸ್ಥೆಯ ಬೋಧಕ ಆಸ್ಪತ್ರೆಗೆ ಅವಶ್ಯಕವಿರುವ ಲೆನಿನ್ ಸಾಮಗ್ರಿಗಳನ್ನು ಇ-ಟೆಂಡರ್ ಮೂಲಕ ಖರೀದಿಸುವ ಬಗ್ಗೆ. | ಹಿಮ್ಸ್ ಸಂಸ್ಥೆಯ ಬೋಧಕ ಆಸ್ಪತ್ರೆಯಲ್ಲಿ ಎನ್.ಕ್ಯೂ.ಎ.ಎಸ್.ಕಾರ್ಯಕ್ರಮ ಅನುಷ್ಠಾನಗೊಂಡಿದ್ದು, ಮತ್ತು 350 ಹಾಸಿಗೆಗಳ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯು ಅತಿ ಶೀಘ್ರದಲ್ಲಿ ಪ್ರಾರಂಭವಾಗುತ್ತಿರುವುದರಿಂದ ಸದರಿ ಆಸ್ಪತ್ರೆ ಕಟ್ಟಡಕ್ಕೆ 350 ಹಾಸಿಗೆಗಳ ಉಪಯೋಗಕ್ಕಾಗಿ ಈ ಕೆಳಕಂಡ ಲಿನನ್‌ಗಳು 1:3 ಅನುಪಾತದಲ್ಲಿ ಸರಬರಾಜು ಮಾಡಿಕೊಡುವಂತೆ ಹಾಗೂ ಅಂದಾಜು ವೆಚ್ಚ ರೂ. 38.98 ಲಕ್ಷಗಳಾಗುತ್ತದೆ ಎಂದು ಶುಶ್ರೂಷಕ ಅಧೀಕ್ಷಕರು ಸಲ್ಲಿಸಿರುವ ಮನವಿ ಪತ್ರವನ್ನು ಸಂಸ್ಥೆಯ ಆರ್ಥಿಕ ಅಧಿಕಾರಿಗಳು ಸಂಸ್ಥೆಯ ಆರ್ಥಿಕ ಸಲಹೆಗಾರರು ಸಭೆಯ ಮುಂದೆ ಮಂಡಿಸಿದರು. |

| Sl. No | Name of the linen items | Stock Report | Rate per unit (ಅಂದಾಜು ವೆಚ್ಚ) | Quantity | Total Amount |
|---|---|---|---|---|---|
| 1 | Rubberised coir Beds 75X 36X4 | 691 | 4922.00 | 350 | 17,22,700.00 |
| 2 | Rubberised coir Pillows 600mmX350 mmX 125mm | 1022 | 360.00 | 350 | 1,26,000.00 |



ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ - 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| | | <table><tr><td>3</td><td>Bed Blanket</td><td>2416</td><td>222.13</td><td>1050</td><td>2,33,236.00</td></tr><tr><td>4</td><td>Red Blanket</td><td>1617</td><td>860.00</td><td>1050</td><td>9,03,000.00</td></tr><tr><td>5</td><td>Mosquito Nets 40X80X54</td><td>1865</td><td>785.00</td><td>1050</td><td>8,24,250.00</td></tr><tr><td>6</td><td>Pillow Cover size 17X27</td><td>1929</td><td>85.00</td><td>1050</td><td>89,250.00</td></tr><tr><td></td><td>**Total**</td><td></td><td></td><td></td><td>**38,98,436.00**</td></tr></table> ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ 350 ಹಾಸಿಗೆಗಳ ಸೌಲಭ್ಯಕ್ಕೆ ಅವಶ್ಯಕವಿರುವ ಮೇಲ್ಕಂಡ ಲೆನಿನ್ ಸಾಮಗ್ರಿಗಳನ್ನು ಕೆ.ಟಿ.ಪಿ.ಪಿ ನಿಯಮಾನುಸಾರ ಇ-ಟೆಂಡರ್ ಮೂಲಕ ಖರೀದಿಸುವುದೆಂದು ಹಾಗೂ ಸದರಿ ವೆಚ್ಚವನ್ನು ಯೂಸರ್ಸ್ ನಿಧಿಯಿಂದ ಪಾವತಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. |
| 17 | 2020-21ನೇ ಸಾಲಿಗೆ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಮತ್ತು ಸಂಸ್ಥೆಯ ಅಧೀನದಲ್ಲಿ ಬರುವ ಇತರೆ ಸಂಸ್ಥೆಗಳಿಗೆ ಭದ್ರತಾ ಮತ್ತು ಇತರೆ ಸೇವೆಗಳು ಹಾಗೂ ಗ್ರೂಪ್ 'ಡಿ' ಅಟೆಂಡರ್ ಸೇವೆಗಳನ್ನು ಹೊರಸಂಪನ್ಮೂಲ ಏಜೆನ್ಸಿಯಿಂದ ಪಡೆಯಲು ಒಂದು ವರ್ಷದ ಅವಧಿಗೆ ಇ-ಟೆಂಡರ್ ಕರೆಯುವ ಬಗ್ಗೆ. | **<u>ಟೆಂಡರ್ -01</u>:**<br>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಮತ್ತು ಸಂಸ್ಥೆಯ ಅಧೀನದಲ್ಲಿ ಬರುವ ಹೊಸ ಬೋಧಕ ಆಸ್ಪತ್ರೆ, ಹಳೆ ಆಸ್ಪತ್ರೆ, ಸರ್ಕಾರಿ ಶುಶ್ರೂಷ ಮಹಾವಿದ್ಯಾಲಯ ಹಾಸನ ಮತ್ತು ಹೊಳೆನರಸೀಪುರ ಇಲ್ಲಿಗೆ 2019-20ನೇ ಸಾಲಿನಲ್ಲಿ ಕೆಟಿಪಿಪಿ ನಿಯಮ 1999-2000 ಪ್ರಕಾರ ಹೊರ ಸಂಪನ್ಮೂಲ ಏಜೆನ್ಸಿಯಿಂದ ರೂ. 370.96 ಲಕ್ಷಗಳ ವೆಚ್ಚದಲ್ಲಿ 167 ಕಾರ್ಮಿಕರನ್ನು ನೇಮಕ ಮಾಡಿಕೊಂಡಿದ್ದ ಟೆಂಡರ್ ಅವಧಿಯು **ದಿನಾಂಕ:31.07.2020ಕ್ಕೆ** ಮುಕ್ತಾಯಗೊಳ್ಳುತ್ತಿದ್ದು, 2020-21ನೇ ಸಾಲಿಗೆ ನಿರ್ಮಾಣ ಹಂತದಲ್ಲಿರುವ 350 ಹಾಸಿಗೆಗಳ ಆಸ್ಪತ್ರೆ ಕಟ್ಟಡ ಒಳಗೊಂಡಂತೆ ಅಗತ್ಯವಿರುವ ಈ ಕೆಳಕಂಡ ಕಾರ್ಮಿಕರನ್ನು ಹೊರಗುತ್ತಿಗೆ ಆಧಾರದಲ್ಲಿ ಸೇವೆ ಒದಗಿಸಿಕೊಡುವಂತೆ ವೈದ್ಯಕೀಯ ಅಧೀಕ್ಷಕರು ಸಲ್ಲಿಸಿದ್ದ ಮನವಿ (2019-20ರಲ್ಲಿದ್ದ ಸಂಖ್ಯೆ -167, 2020-21ನೇ ಸಾಲಿಗೆ ಹೆಚ್ಚುವರಿಯಾಗಿ ಅವಶ್ಯಕವಿರುವ ಕಾರ್ಮಿಕರ ಸಂಖ್ಯೆ 35 ಒಟ್ಟು 202 ಕಾರ್ಮಿಕರು )<br><table><tr><th>ಕ್ರಮ ಸಂಖ್ಯೆ</th><th>ಹುದ್ದೆಗಳ ವಿವರ</th><th>2020-21ನೇ ಸಾಲಿಗೆ ಇ-ಟೆಂಡರ್ ಮೂಲಕ ಪಡೆಯಬೇಕಾಗಿರುವ ಕಾರ್ಮಿಕರ ಸಂಖ್ಯೆ</th><th>2020-21 ನೇ ಸಾಲಿನ ವಾರ್ಷಿಕ ವೆಚ್ಚ</th></tr><tr><td>1</td><td>ಸೆಕ್ಯೂರಿಟಿ ಸೂಪರ್ ವೈಸರ್</td><td>04</td><td></td></tr><tr><td>2</td><td>ಸೆಕ್ಯೂರಿಟಿ ಗಾರ್ಡ್ಸ್</td><td>94</td><td></td></tr><tr><td>3</td><td>ಸೆಕ್ಯೂರಿಟಿ ಗಾರ್ಡ್ಸ್-300 ಹಾಸಿಗೆಗಳಿಗೆ</td><td>21</td><td></td></tr><tr><td>4</td><td>ಅಂಬುಲೆನ್ಸ್ ವಾಹನ ಚಾಲಕರು</td><td>08</td><td></td></tr></table> |



ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ - 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|

| | | | |
|---|---|---|---|
| 5 | ಕಛೇರಿ ವಾಹನ ಚಾಲಕರು | 02 | **4,48,82,833–00** |
| 6 | ಗಾರ್ಡನರ್ | 06 | |
| 7 | ಲಿಫ್ಟ್ ಆಪರೇಟರ್ | 08 | |
| 8 | ಫಾರ್ಮಸಿಸ್ಟ್ | 09 | |
| 9 | ಡೇಟಾ ಎಂಟ್ರಿ ಆಪರೇಟರ್ಸ್ | 28 | |
| 10 | ಇ.ಇ.ಜಿ. ತಂತ್ರಜ್ಞರು | 01 | |
| 11 | ಕ್ಷ–ಕಿರಣ ತಂತ್ರಜ್ಞರು | 04 | |
| 12 | ಎಮ್.ಆರ್.ಐ. ತಂತ್ರಜ್ಞರು | 03 | |
| 13 | ಲ್ಯಾಬ್ ತಂತ್ರಜ್ಞರು | 04 | |
| 14 | ದೈಹಿಕ ಶಿಕ್ಷಕರು | 01 | |
| 15 | ಕ್ಷೌರಿಕ (ಬಾರ್ಬರ್) | 01 | |
| 16 | ಅಡುಗೆ ಸಹಾಯಕರು | 08 | |
| | **ಒಟ್ಟು** | **202** | |

**ಹಾಗೂ**

**<u>ಟೆಂಡರ್ –02</u>**

ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಮತ್ತು ಸಂಸ್ಥೆಯ ಅಧೀನದಲ್ಲಿ ಬರುವ ಹೊಸ ಬೋಧಕ ಆಸ್ಪತ್ರೆ, ಹಳೆ ಆಸ್ಪತ್ರೆ, ಸರ್ಕಾರಿ ಶುಶ್ರೂಷ ಮಹಾವಿದ್ಯಾಲಯ ಹಾಸನ ಮತ್ತು ಹೊಳೆನರಸೀಪುರ ಇಲ್ಲಿಗೆ 2019–20ನೇ ಸಾಲಿನಲ್ಲಿ ಕೆಟಿಪಿಪಿ ನಿಯಮ 1999–2000 ಪ್ರಕಾರ ಹೊರ ಸಂಪನ್ಮೂಲ ಏಜೆನ್ಸಿಯಿಂದ ರೂ. 289.62ಲಕ್ಷಗಳ ವೆಚ್ಚದಲ್ಲಿ 146 ಗ್ರೂಪ್ 'ಡಿ' ಅಟೆಂಡರ್ ಕಾರ್ಮಿಕರನ್ನು ನೇಮಕ ಮಾಡಿಕೊಂಡಿದ್ದ ಟೆಂಡರ್ ಅವಧಿಯು **ದಿನಾಂಕ:31.07.2020ಕ್ಕೆ** ಮುಕ್ತಾಯಗೊಳ್ಳುತ್ತಿದ್ದು, 2020–21ನೇ ಸಾಲಿಗೆ ನಿರ್ಮಾಣ ಹಂತದಲ್ಲಿರುವ 350 ಹಾಸಿಗೆಗಳ ಆಸ್ಪತ್ರೆ ಕಟ್ಟಡ ಒಳಗೊಂಡಂತೆ ಅಗತ್ಯವಿರುವ ಈ ಕೆಳಕಂಡ ಕಾರ್ಮಿಕರನ್ನು ಹೊರಗುತ್ತಿಗೆ ಆಧಾರದಲ್ಲಿ ಸೇವೆ ಒದಗಿಸಿಕೊಡುವಂತೆ ವೈದ್ಯಕೀಯ ಅಧೀಕ್ಷಕರು ಸಲ್ಲಿಸಿದ್ದ ಮನವಿ ಪತ್ರವನ್ನು ಸಂಸ್ಥೆಯ ಆರ್ಥಿಕ ಸಲಹೆಗಾರರು ಸಭೆಯ ಮುಂದೆ ಮಂಡಿಸಿದರು.

(2019–20ರಲ್ಲಿದ್ದ ಸಂಖ್ಯೆ –146, 2020–21ನೇ ಸಾಲಿಗೆ ಹೆಚ್ಚುವರಿಯಾಗಿ ಅವಶ್ಯಕವಿರುವ ಕಾರ್ಮಿಕರ ಸಂಖ್ಯೆ 60 ಒಟ್ಟು 206 ಕಾರ್ಮಿಕರು )



ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ - 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

<table>
<tr><th>ಅಜೆಂಡಾ ಕ್ರಮ ಸಂಖ್ಯೆ</th><th>ವಿಷಯ</th><th>ತೀರ್ಮಾನ</th></tr>
<tr><td></td><td></td><td>
<table>
<tr><th>ಕ್ರಮ ಸಂಖ್ಯೆ</th><th>ಹುದ್ದೆಗಳ ವಿವರ</th><th>2020–21ನೇ ಸಾಲಿಗೆ ಇ–ಟೆಂಡರ್ ಮೂಲಕ ಪಡೆಯಬೇಕಾಗಿರುವ ಕಾರ್ಮಿಕರ ಸಂಖ್ಯೆ</th><th>2020–21ನೇ ಸಾಲಿನ ವಾರ್ಷಿಕ ವೆಚ್ಚ</th></tr>
<tr><td>1</td><td>ಗ್ರೂಪ್ 'ಡಿ'</td><td>206</td><td></td></tr>
<tr><td></td><td>ಒಟ್ಟು</td><td>206</td><td>4,10,01,838–00</td></tr>
</table>
ಮೇಲ್ಕಂಡ ಟೆಂಡರ್ –01 ಮತ್ತು ಟೆಂಡರ್ –02ರ ಬಗ್ಗೆ ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಲಾಯಿತು. ಹೊಸ ಆಸ್ಪತ್ರೆ ಕಟ್ಟಡವೂ ಸೇರಿದಂತೆ ಕಾರ್ಮಿಕರ ಸಂಖ್ಯೆ ಹೆಚ್ಚಿರುವುದನ್ನು ಒಪ್ಪಿ ಕೆ.ಟಿ.ಪಿ.ಪಿ ನಿಯಮಾನುಸಾರ ಇ–ಟೆಂಡರ್ ಪ್ರಕ್ರಿಯೆಯನ್ನು ಕೈಗೊಳ್ಳುವುದೆಂದು ಹಾಗೂ ಟೆಂಡರ್ 1ರ ಅಂದಾಜು ವೆಚ್ಚ ರೂ.4,48,82,833–00 ಹಾಗೂ ಟೆಂಡರ್–2ರ ರೂ.4,10,01,838–00 ಸರ್ಕಾರದಿಂದ ಬಿಡುಗಡೆಯಾಗುವ ಲೆಕ್ಕ–ಶೀರ್ಷಿಕೆ 2210–05–105–1– 49–115 ಅಡಿಯಲ್ಲಿ ಭರಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.
</td></tr>
<tr><td>18</td><td>2020–21 ನೇ ಸಾಲಿಗೆ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಮತ್ತು ಸಂಸ್ಥೆಯ ಅಧೀನದಲ್ಲಿ ಬರುವ ಇತರೆ ಸಂಸ್ಥೆಗಳಿಗೆ ಸ್ವಚ್ಛತಾ ಸೇವೆಗಳನ್ನು ಹೊರಸಂಪನ್ಮೂಲ ಏಜೆನ್ಸಿಯಿಂದ ಪಡೆಯಲು ಒಂದು ವರ್ಷದ ಅವಧಿಗೆ ಇ–ಟೆಂಡರ್ ಕರೆಯುವ ಬಗ್ಗೆ.</td><td>
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಮತ್ತು ಸಂಸ್ಥೆಯ ಅಧೀನದಲ್ಲಿ ಬರುವ ಹೊಸ ಬೋಧಕ ಆಸ್ಪತ್ರೆ, ಹಳೆ ಆಸ್ಪತ್ರೆ, ಸರ್ಕಾರಿ ಶುಶ್ರೂಷ ಮಹಾವಿದ್ಯಾಲಯ ಹಾಸನ ಮತ್ತು ಹೊಳೆನರಸೀಪುರ ಇಲ್ಲಿಗೆ 2019–20ನೇ ಸಾಲಿನಲ್ಲಿ ಕೆಟಿಪಿಪಿ ನಿಯಮ 1999–2000 ಪ್ರಕಾರ ಹೊರ ಸಂಪನ್ಮೂಲ ಏಜೆನ್ಸಿಯಿಂದ ರೂ.3,79,67,130.00 ಲಕ್ಷಗಳ ವೆಚ್ಚದಲ್ಲಿ 127 ಸ್ವಚ್ಛತಾ ಕಾರ್ಮಿಕರನ್ನು ನೇಮಕ ಮಾಡಿಕೊಂಡಿದ್ದ ಟೆಂಡರ್ ಅವಧಿಯ ದಿನಾಂಕ: 31.07.2020ಕ್ಕೆ ಮುಕ್ತಾಯಗೊಳ್ಳುತ್ತಿದ್ದು, 2020–21ನೇ ಸಾಲಿಗೆ ನಿರ್ಮಾಣ ಹಂತದಲ್ಲಿರುವ 350 ಹಾಸಿಗೆಗಳ ಆಸ್ಪತ್ರೆ ಕಟ್ಟಡ ಒಳಗೊಂಡಂತೆ ಅಗತ್ಯವಿರುವ ಈ ಕೆಳಕಂಡ ಸ್ವಚ್ಛತಾ ಕಾರ್ಮಿಕರನ್ನು ಹೊರಗುತ್ತಿಗೆ ಆಧಾರದಲ್ಲಿ ಸೇವೆ ಒದಗಿಸಿಕೊಡುವಂತೆ ವೈದ್ಯಕೀಯ ಅಧೀಕ್ಷಕರು ಸಲ್ಲಿಸಿದ್ದ ಮನವಿ ಪತ್ರವನ್ನು ಸಂಸ್ಥೆಯ ಆರ್ಥಿಕ ಸಲಹೆಗಾರರು ಸಭೆಯ ಮುಂದೆ ಮಂಡಿಸಿದರು. (2019–20ರಲ್ಲಿದ್ದ ಸಂಖ್ಯೆ–127, 2020–21ನೇ ಸಾಲಿಗೆ ಹೆಚ್ಚುವರಿಯಾಗಿ ಅವಶ್ಯಕವಿರುವ ಕಾರ್ಮಿಕರ ಸಂಖ್ಯೆ 24 ಒಟ್ಟು 151 ಕಾರ್ಮಿಕರು )
<table>
<tr><th>ಕ್ರಮ ಸಂಖ್ಯೆ</th><th>ಹುದ್ದೆಗಳ ವಿವರ</th><th>2020–21ನೇ ಸಾಲಿಗೆ ಇ–ಟೆಂಡರ್ ಮೂಲಕ ಪಡೆಯಬೇಕಾಗಿರುವ ಕಾರ್ಮಿಕರ ಸಂಖ್ಯೆ</th><th>2020–21ನೇ ಸಾಲಿನ ವಾರ್ಷಿಕ ವೆಚ್ಚ</th></tr>
<tr><td>1</td><td>ಸ್ವಚ್ಛತಾ ಕಾರ್ಮಿಕರು (ಸ್ಕ್ಯಾವೆಂಜರ್) ರಿಲೀವರ್ (ಬದಲಿ ವ್ಯವಸ್ಥೆ),</td><td>112</td><td></td></tr>
<tr><td>2</td><td>ಸ್ವಚ್ಛತಾ ಕಾರ್ಮಿಕರು (ಸ್ಕ್ಯಾವೆಂಜರ್) 300 ಹಾಸಿಗೆಗಳಿಗೆ</td><td>24</td><td></td></tr>
</table>
</td></tr>
</table>

ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ – 573 201



ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| | | |

| | | | |
|---|---|---|---|
| 3 | ಸ್ವಚ್ಛತಾ ಸೂಪರ್‌ವೈಸರ್ | 03 | **4,55,45,412–00** |
| 4 | ಎಲೆಕ್ಟ್ರಿಷಿಯನ್ | 06 | |
| 5 | ಪ್ಲಂಬರ್ | 05 | |
| 6 | ಮರಗೆಲಸಗಾರರು (ಕಾರ್‌ಪೆಂಟರ್) | 01 | |
| | **ಒಟ್ಟು** | **151** | |

ಮೇಲ್ಕಂಡ ವಿಷಯದ ಬಗ್ಗೆ ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಲಾಯಿತು. ಹೊಸ ಆಸ್ಪತ್ರೆ ಕಟ್ಟಡವೂ ಸೇರಿದಂತೆ ಸ್ವಚ್ಚತಾ ಕಾರ್ಮಿಕರ ಸಂಖ್ಯೆ ಹೆಚ್ಚಿರುವುದನ್ನು ಒಪ್ಪಿ ಕೆ.ಟಿ.ಪಿ.ಪಿ ನಿಯಮಾನುಸಾರ ಇ–ಟೆಂಡರ್ ಪ್ರಕ್ರಿಯೆಯನ್ನು ಕೈಗೊಳ್ಳುವುದೆಂದು ಹಾಗೂ ಟೆಂಡರ್ ಅಂದಾಜು ವೆಚ್ಚ ರೂ.4,55,45,412–00ಗಳನ್ನು ಸರ್ಕಾರದಿಂದ ಬಿಡುಗಡೆಯಾಗುವ ಲೆಕ್ಕ–ಶೀರ್ಷಿಕೆ 2210–05–105–1–49–115 ಅಡಿಯಲ್ಲಿ ಭರಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

"ವಂದನೆಗಳೊಂದಿಗೆ ಸಭೆಯು ಮುಕ್ತಾಯವಾಯಿತು"

ಆರ್ಥಿಕ ಸಲಹೆಗಾರರು,
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ,
ಹಾಗೂ ಸದಸ್ಯ ಕಾರ್ಯದರ್ಶಿಗಳು,
ಆರ್ಥಿಕ ಸಮಿತಿ ಸಭೆ,
ಹಿಮ್ಸ್, ಹಾಸನ.

ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ - 573 201

ನಿರ್ದೇಶಕರು,
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ.
ಹಾಗೂ ಸದಸ್ಯರು, ಆರ್ಥಿಕ ಸಮಿತಿ ಸಭೆ,
ಹಿಮ್ಸ್, ಹಾಸನ.

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ, ಬಹುಮಹಡಿಗಳ ಕಟ್ಟಡ,
ಹಾಗೂ ಅಧ್ಯಕ್ಷರು, ಆರ್ಥಿಕ ಸಮಿತಿ ಸಭೆ,
ಹಿಮ್ಸ್, ಹಾಸನ.